
**ಪತಿ:** ನೀನು ತವರು ಮನೆಗೆ ಹೋದಾಗ ಹೇಗೆ ಫೀಲ್ ಮಾಡ್ಕೋತಿಯ?
**ಪತ್ನಿ:** ನನ್ನ ವಯಸ್ಸು ಐವತ್ತು ಅಲ್ಲ ಈಗಿನ್ನೂ ಹದಿನಾರು ಅನ್ನೊ ತರಹ ಫೀಲ್ ಮಾಡ್ಕೋತಿನಿ.
**ಪತಿ:** ಒಹ್ ಹೌದಾ?
**ಪತ್ನಿ:** ನಿಮಗೆ ಐವತ್ತೆರಡಲ್ಲ ಹದಿನಾರು ವರ್ಷ ಅಂತ ಯಾವಾಗ ಫೀಲ್ ಮಾಡ್ತೀರ?
**ಪತಿ:** ನೀನು ತವರಿಗೆ ಹೋದಾಗ.

**ಪಿಂಕಿ:** ಆಂಟಿ ಈ ಔಷಧ ತಗೊಳ್ಳಿ.
**ಆಂಟಿ:** ಯಾವ ಔಷಧಿ?
**ಪಿಂಕಿ:** ಹೊಟ್ಟೆ ಉರಿ ಶಮನದ ಔಷಧಿ ಆಂಟಿ.
**ಆಂಟಿ:** ನನಗೆ ಈಗ ಹೊಟ್ಟೆ ಉರಿಯುತ್ತಿಲ್ಲಮ್ಮ ಸುಮ್ನೆ ನಾನ್ಯಾಕೆ ತಗೊಳ್ಳಲಿ ಇದನ್ನು.
**ಪಿಂಕಿ:** ಏಕೆಂದರೆ ಅಮ್ಮ ಐವತ್ತು ಗ್ರಾಂ ಬಂಗಾರದ ನೆಕ್ಲೆಸ್ ಮಾಡಿಸಿದ್ದಾಳೆ. ಅದನ್ನು ತೋರಿಸುವುದಕ್ಕೆ ಇಲ್ಲಿಗೆ ಬರ್ತಿದ್ದಾಳೆ ಆಂಟಿ. ಅದಕ್ಕೆ ಈ ಔಷಧಿ ಅವಳಿಗಿಂತ ಮುಂಚೆ ನಾನು ತಗೊಂಡು ಬಂದೆ.

**ಮೇಷ್ಟ್ರು:** ಕುದುರೆ ಹಾಗೂ ಆನೆಗೂ ಏನು ವ್ಯತ್ಯಾಸ. ಹೇಳು.
**ಬಂಟಿ:** ಕುದುರೆಗಳಿಗೆ ಹಿಂದೆ ಮಾತ್ರ ಬಾಲವಿರುತ್ತದೆ. ಆನೆಗೆ ಎರಡು ಕಡೆ ಬಾಲ ಇರುತ್ತದೆ.




**ಗುಂಡ:** ಡಾಕ್ಟ್ರೆ, ಇವನು ನನ್ನ ಮಗ. ಸರಿಯಾಗಿ ಮಾತನಾಡಲು ಬರುವುದಿಲ್ಲ. ಅಸಂಬದ್ಧ ಮಾತು, ಒಂದಕ್ಕೊಂದು ತಾಳ ಮೇಳ ಇಲ್ಲದಿರುವುದು, ಎಲ್ಲಿ ಏನು ಮಾತನಾಡಬೇಕು ಅಂತ ಗೊತ್ತಾಗದೆ ಬಾಯಿಗೆ ಬಂದದ್ದು ಒದರುತ್ತಾನೆ. ಇದಕ್ಕೆ ದಯವಿಟ್ಟು ಏನಾದರೂ ಚಿಕಿತ್ಸೆ ಕೊಡಿ.
**ಡಾಕ್ಟರ್:** ಅದಕ್ಕೆ ಯಾಕೆ ಚಿಂತೆ ಮಾಡ್ತೀರಿ. ಅವನಿಗೆ ರಾಜಕೀಯದಲ್ಲಿ ಉಜ್ವಲ ಭವಿಷ್ಯವಿದೆ. ರಾಜಕೀಯಕ್ಕೆ ಸೇರಿಸಿ, ದೊಡ್ಡ ಮಂತ್ರಿ ಆಗ್ತಾನೆ.

**ಶಿಕ್ಷಕಿ:** ಮಕ್ಕಳೇ ಒಳ್ಳೆಯ ಆರೋಗ್ಯಕ್ಕಾಗಿ ನೀವು ಎಂಟು ಗಂಟೆಗಳ ಕಾಲ ಮಲಗಬೇಕು.
**ಬಬ್ಲಿ:** ಅದು ಹೇಗೆ ಸಾಧ್ಯ ಮೇಡಂ, ಶಾಲೆ ಇರುವುದು ಬರೀ ಏಳು ಗಂಟೆ ಮಾತ್ರ.




**ಚಿಂಟು:** ಸರ್ ಇದೇನು?
**ಮೇಷ್ಟ್ರು:** ಪ್ರಶ್ನೆ ಪತ್ರಿಕೆ.
**ಚಿಂಟು:** ಮತ್ತೆ ಇದೇನು?
**ಮೇಷ್ಟ್ರು:** ಉತ್ತರ ಪತ್ರಿಕೆ.
**ಚಿಂಟು:** ಏನ್ ಸರ್ ಪ್ರಶ್ನೆಪತ್ರಿಕೆಯಲ್ಲಿ ಪ್ರಶ್ನೆಗಳಿವೆ. ಆದರೆ ಉತ್ತರ ಪತ್ರಿಕೆಯಲ್ಲಿ ಉತ್ತರ ಯಾಕಿಲ್ಲ ಸರ್?

**ಮೇಷ್ಟ್ರು:** ಶಬ್ದಮಾಲಿನ್ಯ ಕಡಿಮೆ ಮಾಡುವುದಕ್ಕೆ ಏನು ಮಾಡಬೇಕು?
**ಗುಂಡ:** ನಮ್ಮ ಕಿವಿ ಮುಚ್ಚಿಕೊಳ್ಳಬೇಕು ಸರ್!




**ಗುಂಡ:** ಎಲ್ಲರೂ ಯಾಕೆ ಹೀಗೆ ಓಡುತ್ತಿದ್ದಾರೆ ಅಪ್ಪ?
**ಅಪ್ಪ:** ಇದು ಓಟದ ಸ್ಪರ್ಧೆ ಕಣಪ್ಪ. ಯಾರು ಗೆಲ್ತಾರೆ ಅವನಿಗೆ ಬಹುಮಾನ ಕೊಡ್ತಾರೆ.
**ಗುಂಡ:** ಗೆಲ್ಲುವ ಒಬ್ಬನಿಗೆ ಮಾತ್ರ ಬಹುಮಾನ ಕೊಡೋದಾದ್ರೆ ಮಿಕ್ಕ ಎಲ್ಲರೂ ಯಾಕೇ ಹುಚ್ಚರ ತರಹ ಓಡ್ತಿದ್ದಾರೆ?

ಸುಬ್ಬ ಬೇಕರಿಗೆ ಹೋದ. ಅಲ್ಲೊಂದು ಗಡವ ನಾಯಿ ಕುಳಿತಿರುವುದನ್ನು ನೋಡಿ ಹೀಗೆ ಕೇಳಿದ.
**ಸುಬ್ಬ:** ಸರ್ ನಿಮ್ಮ ನಾಯಿ ಕಚ್ಚಲ್ವ?
**ಬೇಕರಿ ಓನರ್:** ಇಲ್ಲ ನಮ್ಮ ನಾಯಿ ಕಚ್ಚಲ್ಲ.
ಸುಬ್ಬ ಧೈರ್ಯವಾಗಿ ಬೇಕರಿಗೆ ಹೋಗಿ ನಾಯಿ ತಲೆ ಸವರಿದ. ನಾಯಿ ಜೋರಾಗಿ ಕಚ್ಚಿಬಿಟ್ಟಿತು.
**ಸುಬ್ಬ:** ಏನ್ ಸಾರ್ ನಿಮ್ಮ ನಾಯಿ ಕಚ್ಚಲ್ಲ ಅಂದಿದ್ರಿ, ಇಲ್ಲಿ ನೋಡಿ ಹೇಗೆ ಕಚ್ಚಿದೆ ಅಂತ.
**ಬೇಕರಿ ಓನರ್:** ನಿಜವಾಗಿಯೂ ನಮ್ಮ ನಾಯಿ ಕಚ್ಚಲ್ಲ, ಅದು ಮನೆಯಲ್ಲಿ ಇದೆ. ಇದು ಬೀದಿ ನಾಯಿ.

**ಚಿಂಟು:** ನಾಳೆಯಿಂದ ನಾನು ಸ್ಕೂಲ್‌ಗೆ ಹೋಗಲ್ಲಮ್ಮ, ಅಲ್ಲಿ ತುಂಬಾ ಹೊಡಿತಾರೆ.
**ತಾಯಿ:** ನೀನು ತುಂಬಾ ಗಲಾಟೆ ಮಾಡ್ತಿರಬಹುದು. ಅದಕ್ಕೆ ಹೊಡಿತಾರೆ ಅಲ್ವಾ?
**ಚಿಂಟು:** ಇಲ್ಲಮ್ಮ ಸುಮ್ಮನೆ ಮಲ್ಕೊಂಡಿದ್ರೂ ಎಬ್ಬಿಸಿ ಎಬ್ಬಿಸಿ ಬಾರಿಸ್ತಾರೆ.

ಸಂಗ್ರಹ: **ಶರದ ಕುಲಕರ್ಣಿ, ಬೀದರ್**